ಮಾಡುತ್ತಿದ್ದರು. ಆದರೆ ಈಗ ಅದೇ ಫ್ಯಾಷನ್ ಆಗಿ ಮಾರ್ಪಟ್ಟಿದೆ. ಯುವಕ–ಯುವತಿಯರ ಮನಗೆಲ್ಲುತ್ತಿದೆ.

ಹಾಗೆ ನೋಡಿದರೆ ಎಲ್ಲ ವಯೋಮಾನದ, ವಿವಿಧ ವ್ಯಕ್ತಿತ್ವ ಹೊಂದಿದ ಎಲ್ಲರಿಗೂ ಈ ಚೆಕ್ಸ್ ಉಡುಪು ಮ್ಯಾಚ್ ಆಗುತ್ತದೆ. ಯಾವಾಗ ಬೇಕಾದರೂ 'ರೆಡಿ ಟು ವೇರ್' ಎನಿಸಿಕೊಳ್ಳುವ ಈ ಚೆಕ್ಸ್ ಉಡುಪುಗಳು ಧರಿಸಿದವರಿಗೆ ಆರಾಮದಾಯಕವೂ ಆಗಿರುತ್ತದೆ.





## ಬ್ರಿಟಿಷರ ಕಾಲದ್ದು...

ಚೆಕ್ಸ್ ಶರ್ಟ್, ಉಡುಗೆಗಳ ಬಳಕೆ ಬ್ರಿಟಿಷರ ಕಾಲದಿಂದಲೂ ಚಾಲ್ತಿಯಲ್ಲಿತ್ತು. ಆ ಕಾಲದಲ್ಲಿ ಅಧಿಕಾರಿ ವರ್ಗದವರು ಉದ್ದ ಗೆರೆ, ಚೌಕುಳಿಗಳುಳ್ಳ ಶರ್ಟ್‌ಗಳನ್ನು ಹೆಚ್ಚಾಗಿ ಧರಿಸುತ್ತಿದ್ದರು. ಅವರು ಕ್ಲಾಸಿಕ್ ಲುಕ್ ಕೊಡುವುದನ್ನೂ ಇಷ್ಟಪಡುತ್ತಿದ್ದರು. ಅಲ್ಲದೆ ಅದು ಅವರ ಘನತೆಯನ್ನೂ ಹೆಚ್ಚಿಸುತ್ತಿತ್ತು. ಬರೀ ಆಫೀಸರ್ ಮಟ್ಟದಲ್ಲಿ ಮಾತ್ರ ಧರಿಸಲಾಗುತ್ತಿದ್ದ ಈ ತರಹದ ಶರ್ಟ್‌ಗಳು ಕ್ರಮೇಣ ಎಲ್ಲಾ ವರ್ಗದ ಜನರನ್ನೂ ಆಕರ್ಷಿಸತೊಡಗಿದವು. ಬರೀ ಆಂಗ್ಲರೇ ಧರಿಸುತ್ತಿದ್ದ ಈ ಚೆಕ್ಸ್ ಉಡುಪುಗಳನ್ನು ನಿಧಾನವಾಗಿ ಸೆಲೆಬ್ರಿಟಿಗಳು, ಮಾಡೆಲ್‌ಗಳು, ಚಿತ್ರತಾರೆಯರು ಧರಿಸಲು ಪ್ರಾರಂಭಿಸಿದರು. ಇತ್ತೀಚಿನ ದಿನಗಳಲ್ಲಿ ಸಾಮಾನ್ಯ ಜನರೂ ಈ ತರಹದ ವಿನ್ಯಾಸಗಳಿಗೆ ಮಾರು ಹೋಗಿ ತಮ್ಮ ದಿನನಿತ್ಯದ ಉಡುಪುಗಳಾಗಿ ಬಳಸುತ್ತಿದ್ದಾರೆ. ಫ್ಯಾಷನ್‌ಪ್ರಿಯರಿಗೆ ಈ ಉಡುಪು ತಮ್ಮ ಪ್ರತಿಷ್ಠೆಯ ಪ್ರತೀಕವಾಗಿಯೂ ರೂಪುಗೊಂಡಿದೆ.

ಕಾರ್ಪೊರೇಟ್ ಸಂಸ್ಕೃತಿ ಬೆಳೆಯುತ್ತಿರುವ ಇಂದಿನ ಕಾಲಕ್ಕೆ ಅತ್ಯಂತ ಸೂಕ್ತವಾಗಿದೆ ಈ ಚೆಕ್ಸ್ ಉಡುಪು. ಮದುವೆ ಸಮಾರಂಭಗಳಿರಲಿ, ಪಾರ್ಟಿಗಳಿರಲಿ, ಆಧುನಿಕ ಉಡುಪಿಗೂ, ಸಾಂಪ್ರದಾಯಿಕತೆಗೂ ಹೊಂದಿಕೆಯಾಗುವ ಈ ಚೆಕ್ಸ್ ಬಟ್ಟೆಗಳನ್ನೇ ಜನ ಹೆಚ್ಚಾಗಿ ಇಷ್ಟಪಡುತ್ತಿದ್ದಾರೆ. ಮಹಿಳೆಯರು ಮದುವೆಗಳಲ್ಲಿ ತಾವು ಧರಿಸುವ ರೇಷ್ಮೆ ಸೀರೆಗಳಲ್ಲಿಯೂ ಕೂಡ ಚೆಕ್ಸ್ ಆಕೃತಿಯಿರುವ ಸೀರೆ ಧರಿಸಿ ಸಖತ್ತಾಗಿ ಮಿಂಚುತ್ತಿದ್ದಾರೆ.

ಚೆಕ್ಸ್ ಉಡುಪು ವಿನ್ಯಾಸಕಾರರು ಸಲ್ವಾರ್‌ಗಳ ಮೇಲೆ, ಕುರ್ತಿ ಮೇಲೆ, ಸೀರೆಗಳ ಮೇಲೆ ಹಾಗೂ ಮಕ್ಕಳ ಡ್ರೆಸ್‌ಗಳ ಮೇಲೆ ಕೂಡ ಬೇರೆ ಬೇರೆ ವಿನ್ಯಾಸವನ್ನು ಸೃಷ್ಟಿಸುತ್ತಿದ್ದಾರೆ. ಹೂ ಬಳ್ಳಿಗಳು, ಫ್ಲೋರಲ್ ಡಿಸೈನ್ ಅನ್ನು ಕೂಡ ಈ ಚೆಕ್ಸ್ ಬಟ್ಟೆಗಳಿಗೆ ಹೊಂದಿಸಿ ಡಿಸೈನರ್ ವೇರ್‌ಗಳನ್ನು ತಯಾರಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿದ್ದಾರೆ. ಯುವಪೀಳಿಗೆಯ ಯುವಕ ಯುವತಿಯರ ಹಾಟ್ ಫೇವರೆಟ್ ಎನಿಸಿರುವ ಈ ಚೆಕ್ಸ್ ಉಡುಪುಗಳಲ್ಲಿ ಪ್ರಮುಖವಾಗಿ ಕಪ್ಪುಬಿಳುಪು ಚೆಕ್ಸ್ ಬಟ್ಟೆ ಅತ್ಯಂತ ಟ್ರೆಂಡಿಯಾಗಿದೆ.

ಜೀನ್ಸ್ ಪ್ಯಾಂಟ್‌ಗಳ ಮೇಲೆ ಕಪ್ಪು ಬಿಳುಪು ಚೆಕ್ಸ್ ಶರ್ಟ್ ಸಖತ್ತಾಗಿ ಕಾಣುತ್ತದೆ. ಚೆಕ್ಸ್ ವಿನ್ಯಾಸದ ಟಾಪ್‌ಗಳು ಸಲ್ವಾರ್ ಮೇಲೆ ಲೆಗಿಂಗ್ಸ್ ಮೇಲೆ ಕೂಡ ತುಂಬಾ ಚೆನ್ನಾಗಿ ಕಾಣುತ್ತದೆ. ಕೆಂಪು ಬಣ್ಣದ ಮೇಲೆ ಕಪ್ಪು ಚೆಕ್ಸ್ ಕೂಡ ಟ್ರೆಂಡಿಯೇ. ಪಾರ್ಟಿವೇರ್‌ನಲ್ಲಿ ಇಂಥ ಚೆಕ್ಸ್ ಹವಾ ಜೋರಾಗಿದೆ. ಹಾಗೇ ಸಾಂಪ್ರದಾಯಿಕ ಉಡುಪಾದ ಸೀರೆಯಲ್ಲಿಯೂ ಚೆಕ್ಸ್ ತನ್ನ ಸ್ಥಾನ ಗಟ್ಟಿಯಾಗಿಸಿಕೊಂಡಿದೆ. ಉತ್ತರ ಕರ್ನಾಟಕದ ಭಾಗಗಳಲ್ಲಿ ಚೆಕ್ಸ್ ವಿನ್ಯಾಸದ ಕಾಟನ್ ಹಾಗೂ ಸಿಲ್ಕ್ ಬಟ್ಟೆಗಳಲ್ಲಿ ತಯಾರಾಗುವ ಇಳಕಲ್ ಸೀರೆಗಳು ವಿಶ್ವಖ್ಯಾತಿ ಗಳಿಸಿವೆ. ■

## ಯಾರಿಗೆ ಯಾವ ಉಡುಪು ಸೂಕ್ತ?

- ಎಲ್ಲಾ ಕಾಲದಲ್ಲೂ ಫ್ರೆಶ್ ಎನಿಸುವ ಈ ಚೆಕ್ಸ್ ಉಡುಪುಗಳು ವಯಸ್ಸಾದವರೂ ಚಿಕ್ಕವರಂತೆ ಕಾಣಲು ಸಹಾಯಕವಾಗಿವೆ.
- ದಪ್ಪಗಿರುವವರನ್ನೂ ಸಣ್ಣಗೆ ಕಾಣುವಂತೆ ಮಾಡುತ್ತದೆ.
- ಕುಳ್ಳಗಿರುವವರು ಆದಷ್ಟು ಉದ್ದುದ್ದ ಗೆರೆಯ ಅಥವಾ ಚಿಕ್ಕ ಚಿಕ್ಕ ಚೆಕ್ಸ್ ಉಳ್ಳ ಬಟ್ಟೆ ಧರಿಸುವುದು ಸೂಕ್ತ. ಆದರೆ ದೊಡ್ಡ ದೊಡ್ಡ ಬ್ಲಾಕ್‌ಗಳು ಮತ್ತು ಅಡ್ಡಗೆರೆಯ ಬಟ್ಟೆ ಧರಿಸಿದರೆ ಇನ್ನು ಕುಳ್ಳರಂತೆ ಕಾಣುತ್ತಾರೆ.
- ಡೈನಮಿಕ್ ಆಗಿ ಕಾಣಬಯಸುವವರು ತಿಳಿ ಬಣ್ಣದ ಉಡುಪಿನ ಮೇಲೆ ಚೆಕ್ಸ್ ಜಾಕೆಟ್ ಧರಿಸಿದರೆ ಉಡುಪಿನಲ್ಲಿ ಹೊಸತನ ಕಂಡುಬರುತ್ತದೆ.
- ಟಾಪ್ ಟು ಬಾಟಮ್ ಒಂದೇ ಬಣ್ಣದ ಉಡುಪು ಧರಿಸಿದವರು ಅದರ ಮೇಲೆ ಚೆಕ್ಸ್ ಸ್ಕಾರ್ಫ್ ಧರಿಸಿದರೆ ಫ್ಯಾಷನಬಲ್ ಲುಕ್ ನಿಮ್ಮದಾಗುತ್ತದೆ.
- ಬ್ಲಾಕ್ ಲೆಗಿಂಗ್ಸ್ ಮೇಲೆ ಕೆಂಪು ಅಥವಾ ಕಪ್ಪು ಚೆಕ್ಸ್ ಉಳ್ಳ ಟಾಪ್ ಧರಿಸಿದರೆ ಅಲ್ಟ್ರಾ ಮಾಡರ್ನ್ ಲುಕ್ ಪಡೆಯಬಹುದು.
- ಚೆಕ್ಸ್ ಸ್ಕರ್ಟ್ ಧರಿಸಿ ಮೇಲೆ ಫುಲ್ ಸ್ಲೀವ್‌ನ ಟಾಪ್ ಧರಿಸಿದರೆ ತುಂಬಾ ಚೆನ್ನಾಗಿ ಕಾಣುತ್ತದೆ.
- ಪ್ಲೈನ್ ಟೀ ಶರ್ಟ್, ಬ್ಲಾಕ್ ಪ್ಯಾಂಟ್ ಮೇಲೆ ಚೆಕ್ಸ್ ಶರ್ಟ್ ಧರಿಸುವುದು ಉತ್ತಮ.
- ಪುರುಷರಂತೆ ಡ್ರೆಸ್ ಮಾಡಿಕೊಳ್ಳಬಯಸುವವರಿಗೆ ಉತ್ತಮ ಫಿಟ್ಟಿಂಗ್ ಇರುವ ಚೆಕ್ಸ್ ಶರ್ಟ್, ಜೀನ್ಸ್ ಇಲ್ಲವೇ ಡೆನಿಮ್ ಫಿಟ್ಟೆಡ್ ಪ್ಯಾಂಟ್ ಸೂಕ್ತ ಆಯ್ಕೆ.
- ಶಾಪಿಂಗ್‌ಗೆ ಹೋಗುವಾಗ ಅಥವಾ ಟೂರ್‌ಗೆ ಹೋಗುವಾಗ ಜೀನ್ಸ್ ಮೇಲೆ ಯಾವುದೇ ಬಣ್ಣದ ಚೆಕ್ಸ್ ಟಾಪ್ ಧರಿಸಬಹುದು.
- ಆಫೀಸ್‌ಗೆ ಹೋಗುವಾಗ ಆದಷ್ಟು ಲೈಟ್ ಕಲರ್‌ನ ಚೆಕ್ಸ್ ಶರ್ಟ್, ಪ್ಯಾಂಟ್ ಮತ್ತು ಕೋಟ್ ಧರಿಸುವುದು ಸೂಕ್ತ.
- ಬರೀ ಚೆಕ್ಸ್ ಉಡುಪುಗಳು ಮಾತ್ರವಲ್ಲದೆ ಚೆಕ್ಸ್ ಆಕ್ಸೆಸರೀಸ್‌ಗಳೂ ಕೂಡ ಹೆಚ್ಚು ಜನರನ್ನು ಆಕರ್ಷಿಸುತ್ತಿವೆ. ಚೆಕ್ಸ್ ಬ್ಯಾಗ್‌ಗಳು, ಚಪ್ಪಲಿ, ಹೇರ್‌ಬ್ಯಾಂಡ್, ಹೇರ್‌ಕ್ಲಿಪ್‌ಗಳು, ಬೆಲ್ಟ್‌ಗಳು, ಬಳೆಗಳು, ಹ್ಯಾಟ್‌ಗಳಲ್ಲೂ ಚೆಕ್ಸ್ ವಿನ್ಯಾಸವಿದ್ದರೆ ಸ್ಟೈಲಿಷ್ ಆಗಿ ಕಾಣಬಹುದು.